ದಿ:20.08.2022 OS.No.76/2011 DW-1

ದಿ:20.08.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ. ಡಿ ಎನ್ ಎನ್ ವಕೀಲರಿಂದಃ

ನಾನೇ ವಕೀಲರಿಗೆ ಮಾಹಿತಿ ನೀಡಿ ನನ್ನ ಪ್ರತಿವಾದ ಪತ್ರವನ್ನು ಹೇಳಿ ಬರೆಸಿರುತ್ತೇನೆ. ದಿ.*06.02.1956* ರಲ್ಲಿ ವಾದಿಗಳ ತಂದೆ ಮತ್ತು ನಮ್ಮ ತಂದೆ ವಿಭಾಗ ಮಾಡಿಕೊಂಡಿದ್ದಾರೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿದ್ದೇವೆ ಎಂದರೆ ಸರಿ. ಸದರಿ ವಿಭಾಗ ಪತ್ರದ ನಕಲನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿ. ದಿ.*06.02.1956* ವಿಭಾಗ ಪಾರಿಕತ್ ಪ್ರಕಾರ ದಾವಾ ಸ್ವತ್ತು ನಮ್ಮ ತಂದೆಗೆ ಸೇರಿದ್ದು, ಅದರ ಚೆಕ್ಕು ಬಂದಿ ಪೂರ್ವಕ್ಕೆ ಚನ್ನಂಕೇಗೌಡರಿಗೆ ಸೇರಿದ ಸ್ವತ್ತು, ಪಶ್ಚಿಮಕ್ಕೆ ನಮ್ಮ ಚಿಕ್ಕಪ್ಪನಿಗೆ ಸೇರಿದ ಸ್ವತ್ತು, ದಕ್ಷಿಣಕ್ಕೆ ಬಿ ಎಂ ರಸ್ತೆ, ಉತ್ತರಕ್ಕೆ ಅಪ್ಪಾಜೀಗೌಡ ಮತ್ತು ಇತರರು ಎಂದು ನುಡಿಯುತ್ತಾರೆ. ನಾನು ಮೇಲೆ ಹೇಳಲಾದ ಚೆಕ್ಕು ಬಂದಿ ಸುಳ್ಳು ಮತ್ತು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅರ್ ಟಿ ಸಿಯನ್ನು ನಾನು ಗುರುತಿಸುತ್ತೇನೆ. ಈ ಹಂತದಲ್ಲಿ ಸಾಕ್ಷಿಗೆ ಗಣಕೀಕೃತ ಆರ್ ಟಿ ಸಿ ಯನ್ನು ತೋರಿಸಲಾಗಿ ಅದು ದಾವಾ ಸ್ವತ್ತಿಗೆ ಸೇರಿದ ಆರ್ ಟಿ ಸಿ ಎಂದು ನುಡಿಯುತ್ತಾರೆ. ಅದನ್ನು ನಿಪಿ-*7* ಎಂದು ಗುರುತಿಸಲಾಯಿತು. ನಿಪಿ-*7*ರಲ್ಲಿ ಎಂ ಸಿ ಮಹದೇವು ಬಿನ್ ಲೇಟ್ ಚನ್ನಂಕೇಗೌಡ ಎಂದು ಇದ್ದು ಅವರು ನಮ್ಮ ಚಿಕ್ಕತಾತನ ಮೊಮ್ಮಗ ಎಂದು ನುಡಿಯುತ್ತಾರೆ. ದಿ.*04.02.1963* ರಲ್ಲಿ ನಮ್ಮ ತಂದೆ, ಚನ್ನೇಗೌಡ, ಎಳವೇಗೌಡ ಮರೀಅಂಕೇಗೌಡ, ಮಹದೇವ ಮತ್ತು ಚಿಕ್ಕತಾತನವರಾದ ಚನ್ನಂಕೇಗೌಡರು ಅಸ್ಪತ್ರೆಗೆ ಜಮೀನನ್ನು ದಾನ ನೀಡಿದ್ದಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ *206/1* ಒಂದು ಎಕರೆ *206/2* *11* ಗುಂಟೆ *208/4* ನಲ್ಲಿ *1* ಎಕರೆ *4* ಗುಂಟೆ *207/1* ರಲ್ಲಿ *1* ಎಕರೆ *22* ಗುಂಟೆ ಒಟ್ಟು *4* ಎಕರೆಯನ್ನು ಅಸ್ಪತ್ರೆಗೆ ದಾನವಾಗಿ ನೀಡಿದ್ದಾರೆ ಎಂದರೆ ಸಾಕ್ಷಿ ಅದರ

ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರ ನನಗೆ ಪೂರ್ಣ ಪ್ರಮಾಣದಲ್ಲಿ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-*7*ರಲ್ಲಿ ಆಸ್ಪತ್ರೆಗೆ *1* ಎಕರೆ *36* ಗುಂಟೆ ದಾನ ಎಂದು ನಮೂದು ಆಗಿದೆ ಎಂದರೆ ಸರಿ. *1* ಎಕರೆ *22* ಗುಂಟೆ ಬದಲಾಗಿ ಅಸ್ಪತ್ರೆಗೆ *1* ಎಕರೆ *36* ಗುಂಟೆ ನಿಪಿ-*7*ರಲ್ಲಿ ನಮೂದು ಅಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹೆಚ್ಚುವರಿ ಜಮೀನನ್ನು ವಾದಿಗಳ ಒಟ್ಟು ಕುಟುಂಬಕ್ಕೆ ಖಾತೆಯನ್ನು ಮಾಡಿಕೊಡಲು ತಹಸಿಲ್ದಾರರವರ ಮನವಿ ಪತ್ರ ನೀಡಿದ್ದಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ